**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/ವಿಯೋ/09/IITB/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:04-07-2017.

# ಸುತ್ತೋಲೆ

ವಿಷಯ: ಐಐಟಿ ಮುಂಬೈನವರು ನಡೆಸುತ್ತಿರುವ Spoken Tutorials ಕಾರ್ಯಕ್ರಮವನ್ನು 2017-18ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮುಂದುವರಿಸುವ ಬಗ್ಗೆ.

******

**ಪೀಠಿಕೆ:** IIT, ಮುಂಬೈ National Mission on Education through Information Communication Technology (NMEICT)ಯ ಅಂಗವಾಗಿ ನಡೆಸುವ Spoken Tutorials ಕಾರ್ಯಕ್ರಮದಡಿ ವಿದ್ಯಾರ್ಥಿಗಳಿಗೆ ವಿವಿಧ Free and Open Source Software ಕಲಿಕೆ ಸೌಲಭ್ಯವನ್ನು ಕಲ್ಪಿಸುವ ಉದ್ದೇಶದಿಂದ, 2014-15ನೇ ಸಾಲಿನಿಂದ ಇಲ್ಲಿಯವರೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸದರಿ ತರಬೇತಿಯನ್ನು ಅನುಷ್ಠಾನಗೊಳಿಸಲಾಗಿತ್ತು. ಸದರಿ ಕಾರ್ಯಕ್ರಮದಡಿ ಲಭ್ಯವಿರುವ ಕೋರ್ಸುಗಳು ವಿಶ್ವವಿದ್ಯಾಲಯಗಳ ಪಠ್ಯಕ್ರಮಕ್ಕೆ ಪೂರಕವಾಗಿದ್ದು, ಇವುಗಳ ಕಲಿಕೆಯು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಬಹಳ ಸಹಾಯಕಾರಿಯಾಗಿರುವುದಲ್ಲದೆ, ವಿದ್ಯಾರ್ಥಿಗಳ ಉದ್ಯೋಗಾರ್ಹತೆಯನ್ನೂ ಹೆಚ್ಚಿಸುತ್ತದೆ. ಆದ್ದರಿಂದ ಈ ಸೆಮಿಸ್ಟರ್‌ನಲ್ಲಿಯೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪದವಿ ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮವನ್ನು ಮುಂದುವರಿಸಬೇಕಾಗಿದೆ.

**ಕಾರ್ಯಕ್ರಮದ ಸ್ವರೂಪ:**

Spoken Tutorials ಕಾರ್ಯಕ್ರಮ ವಿಶೇಷವಾಗಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು (MHRD) ರೂಪಿಸಿರುವ ಕಾರ್ಯಕ್ರಮವಾಗಿದ್ದು, ಇದರಲ್ಲಿ ಬಳಸಲಾಗುವ ಕಲಿಕೆಯ ಸಾಮಗ್ರಿ ಮತ್ತು ತಂತ್ರಾಂಶಗಳನ್ನು IIT ಮುಂಬೈ ಸಿದ್ಧಪಡಿಸಿದೆ. ಸದರಿ ಕಾರ್ಯಕ್ರಮದಲ್ಲಿ ಶ್ರೇಷ್ಠ ಆಡಿಯೋ-ವಿಡಿಯೋಗಳ ನೆರವಿನಿಂದ ಉತ್ತಮ ಗುಣಮಟ್ಟದ ಕಂಪ್ಯೂಟರ್ ಶಿಕ್ಷಣವನ್ನು ವಿವಿಧ ಹಂತಗಳಲ್ಲಿ **ಉಚಿತವಾಗಿ** ಮತ್ತು **ದೂರ ಸಂವಹನ** ಪದ್ಧತಿಯಲ್ಲಿ ವಿದ್ಯಾರ್ಥಿಗಳು ಪಡೆಯಬಹುದಾಗಿದೆ.

ಈ ಕೋರ್ಸ್‌ಗಳಿಗೆ ನೋಂದಾಯಿಸಿಕೊಳ್ಳುವ ವಿದ್ಯಾರ್ಥಿಗಳು ಸಾಫ್ಟ್‌ವೇರ್ ಬಳಕೆಯನ್ನು ಕಾಲೇಜಿನ ವೇಳೆಯಲ್ಲಲ್ಲದೆ ತಮಗೆ ಅನುಕೂಲವಾಗುವ ಇತರ ಸಮಯದಲ್ಲೂ, ಆನ್‌ಲೈನ್/ಆಫ್‌ಲೈನ್ ವಿಧಾನದಲ್ಲಿ, ಕನ್ನಡವೂ ಸೇರಿದಂತೆ ತಮಗೆ ಪರಿಚಿತವಾದ ಭಾಷೆಗಳಲ್ಲಿ ಕಲಿತುಕೊಳ್ಳಬಹುದು. ಕಲಿಕೆಯ ನಂತರ, IIT ಮುಂಬೈ ನಡೆಸುವ Online Testನಲ್ಲಿ ಭಾಗವಹಿಸಿ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ IIT ಮುಂಬೈ ವತಿಯಿಂದ ಪ್ರಮಾಣಪತ್ರಗಳು ದೊರೆಯಲಿವೆ. ಕಂಪ್ಯೂಟರ್ ಸಾಕ್ಷರತೆಯನ್ನು ಸಾಬೀತು ಪಡಿಸುವ ಈ ಪ್ರಮಾಣ ಪತ್ರ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಉಪಯುಕ್ತವಾಗುತ್ತದೆ.

'ಸ್ಪೋಕನ್ ಟ್ಯುಟೋರಿಯಲ್' ತರಬೇತಿಯ ಮೂಲಕ ಪದವಿ/ಸ್ನಾತಕೋತ್ತರ ವಿದ್ಯಾರ್ಥಿಗಳು ಗರಿಷ್ಠ ಪ್ರಯೋಜನ ಪಡೆಯಲು ಪೂರಕವಾಗುವಂತೆ IIT ಮುಂಬೈ ಸೂಚಿಸಿರುವ ತರಗತಿಗಳು ಮತ್ತು ಕೋರ್ಸುಗಳ ಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದೆ.

AICTE ನಿರ್ದೇಶನದಂತೆ MCA ವಿದ್ಯಾರ್ಥಿಗಳ ಅನುಕೂಲಕ್ಕಾಗಿ IIT ಮುಂಬೈ ಇತ್ತೀಚೆಗೆ DRUPAL Tutorials ಅಭಿವೃದ್ಧಿಪಡಿಸಿರುವುದು ಗಮನಾರ್ಹವಾಗಿದ್ದು, ಸಂಬಂಧಪಟ್ಟ ವಿದ್ಯಾರ್ಥಿಗಳು ಈ ಟ್ಯುಟೋರಿಯಲ್ಸ್‌ನ ಪ್ರಯೋಜನವನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸ್ಪೋಕನ್ ಟ್ಯುಟೋರಿಯಲ್ ಕಾರ್ಯಕ್ರಮಕ್ಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಎಲ್ಲ ವಿದ್ಯಾರ್ಥಿಗಳೂ ಅವರ ಆಯ್ಕೆಯ ಯಾವುದಾದರೊಂದು ಕೋರ್ಸ್‌ಗೆ ನೋಂದಾಯಿಸಿಕೊಳ್ಳುವಂತೆ ಹಾಗೂ ಕಲಿಕೆಯ ನಂತರ Online Testನಲ್ಲಿ ಭಾಗವಹಿಸುವಂತೆ ಪ್ರಾಂಶುಪಾಲರು ಅಗತ್ಯ ಕ್ರಮವಹಿಸುವುದು. ವಿಶೇಷವಾಗಿ, ಪ್ರಥಮ ಪದವಿ ತರಗತಿಯ ಎಲ್ಲ ವಿದ್ಯಾರ್ಥಿಗಳು Spoken Tutorials ಕಾರ್ಯಕ್ರಮದಡಿ ತಮ್ಮ ಆಯ್ಕೆಯ ಯಾವುದಾದರೊಂದು ಕೋರ್ಸ್‌ಗೆ ಮತ್ತು Basic IT ಕೋರ್ಸ್‌ಗೆ ಕಡ್ಡಾಯವಾಗಿ ನೋಂದಾಯಿಸಿಕೊಂಡು ಕಾರ್ಯಕ್ರಮದ ಪ್ರಯೋಜನ ಪಡೆಯುವಂತೆ ಪ್ರಾಂಶುಪಾಲರು ಕ್ರಮ ವಹಿಸುವುದು. ಈ ತರಬೇತಿಯ ಉಪಯುಕ್ತತೆಯನ್ನು ವಿವರವಾಗಿ ಮನವರಿಕೆ ಮಾಡಿಕೊಡುವ ಮೂಲಕ ಪ್ರತಿಯೊಬ್ಬ ಪ್ರಥಮ ಪದವಿ ವಿದ್ಯಾರ್ಥಿಯೂ ಈ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸುವಂತೆ ನೋಡಿಕೊಳ್ಳುವುದು.

Basic IT ಕೋರ್ಸಿನಲ್ಲಿ ಕಂಪ್ಯೂಟರ್‌ನ ಮೂಲಭೂತ ಬಳಕೆಯ ಜೊತೆಗೆ Firefox & Libre Office ಸೇರಿದ್ದು, ಡಿಸೆಂಬರ್'2017 ರೊಳಗೆ IIT ಮುಂಬೈ ನಡೆಸುವ Libre Office ಕುರಿತ Online Testನಲ್ಲಿ ಎಲ್ಲ ಪ್ರಥಮ ಪದವಿ ವಿದ್ಯಾರ್ಥಿಗಳು ಕಡ್ಡಾಯವಾಗಿ ಭಾಗವಹಿಸತಕ್ಕದ್ದು. ಸದರಿ Online Testನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ IIT ಮುಂಬೈ ವತಿಯಿಂದ ಪ್ರಮಾಣಪತ್ರಗಳು ದೊರೆಯಲಿವೆ.

Spoken Tutorials ಕಾರ್ಯಕ್ರಮದ ಯಶಸ್ವೀ ಅನುಷ್ಠಾನಕ್ಕಾಗಿ ಕಾಲೇಜಿನ ಕೌಶಲ್ಯ ಕೇಂದ್ರದ ನೋಡಲ್ ಅಧಿಕಾರಿಗಳನ್ನೇ ಈ ಕಾರ್ಯಕ್ರಮದ ನಿರ್ವಹಣೆಗಾಗಿ ನೇಮಿಸುವುದು. Spoken Tutorials ಕಾರ್ಯಕ್ರಮದ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸದರಿ ಕಾರ್ಯಕ್ರಮಕ್ಕೆ ನೋಂದಾಯಿಸಿಕೊಳ್ಳುವಂತೆ, ಪರಿಣಾಮಕಾರಿಯಾಗಿ ತರಬೇತಿ ಪಡೆದು Online Testನಲ್ಲಿ ಭಾಗವಹಿಸುವಂತೆ ಹಾಗೂ ಪ್ರತಿ ತಿಂಗಳಿಗೊಮ್ಮೆ ಪ್ರಗತಿ ವರದಿಯನ್ನು ಇಲಾಖೆಗೆ spokentutorial.dce@gmail.com ಮೂಲಕ ಸಲ್ಲಿಸುವಂತೆ ನೋಡಲ್ ಅಧಿಕಾರಿಗಳಿಗೆ ಸೂಚಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ dharmadhikarianushree@gmail.com ಅನ್ನು ಸಂಪರ್ಕಿಸಬಹುದಾಗಿದೆ.
ಮೊಬೈಲ್ ಸಂಖ್ಯೆ: 9172113360

ಕಾಲೇಜು ಶಿಕ್ಷಣ ಆಯುಕ್ತರು.

**ಇವರಿಗೆ:**
ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:**
1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರ್ಗಿ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕಾಶಿಇ, ಬೆಂಗಳೂರು – ಇಲಾಖಾ ವೆಬ್ ಸೈಟಿನಲ್ಲಿ ಪ್ರಕಟಿಸಲು.
3) ಕಛೇರಿ ಪ್ರತಿ.